**ಆರ್‌ಎ ನಂಬರ್‌ಃ 120-11** **ಡಿಡಬ್ಲ್ಯೂಃ 1**

ದಿನಾಂಕಃ 12**-01-2017** ರಂದು ಪ್ರಮಾಣ ವಚನ ವಿಧಿಸಲಾಯಿತು.

**ಶ್ರೀ ಹೆಚ್‌ವಿಆರ್ ವಕೀಲರಿಂದ ಪಾಟಿ ಸವಾಲುಃ**

ನಿಡಿ-4ರಲ್ಲಿ ಯಾವುದೇ ಒಂದು ನಂಬರನ್ನು ನಮೂದು ಮಾಡಿಲ್ಲ ಎಂದರೆ ನನಗೆ ಓದು ಬರಹ ಬರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ನಿಡಿ-5ನ್ನು ನನ್ನ ಹೆಸರಿಗೆ ಕೊಡುವಾಗ ಪಂಚಾಯಿತಿ ಕಾರ್ಯದರ್ಶಿಯವರು ಏನಾದರೂ ಸ್ಥಳ ತನಿಖೆ ಮಾಡಿದ್ದರಾ ಎಂದರೆ ಸಾಕ್ಷಿ ಮಂಡಲ್‌ಗೆ ಹೋಗಿ ಪಂಚಾಯಿತಿ ಮುಖಾಂತರ ಮಾಡಿಸಿಕೊಂಡಿದ್ದೇನೆ ಎಂದಿರುತ್ತಾರೆ. ಸದರಿ ಆಸ್ತಿಯನ್ನು ನಾನು ಸಿದ್ದಮ್ಮನಿಂದ ಖರೀದಿ ಮಾಡಿದ್ದೆ ಆ ಆಧಾರದ ಮೇಲೆ ಮಾಡಿಸಿಕೊಂಡೆ. ಅ ರೀತಿ ಖರೀದಿ ಮಾಡಿದ್ದೇನೆ ಎಂದು ಹೇಳಲು ಏನಾದರೂ ಪತ್ರ ನೊಂದಾಗಿತ್ತಾ ಎಂದರೆ ಸಾಕ್ಷಿ ನಾವು ಕರಾರುಪತ್ರ ಮಾಡಿಸಿಕೊಂಡಿದ್ದೆವು ಆ ಅಧಾರದ ಮೇಲೆ ಮಾಡಿಸಿಕೊಂಡಿದ್ದೇನೆ. ಸದರಿ ಕರಾರುಪತ್ರದ ಅಧಾದರ ಮೇಲೆ ನನ್ನ ಹೆಸರಿಗೆ ಮಂಡಲ್‌ನವರು ಮಾಡಿಲ್ಲ ಎಂದರೆ ಸರಿಯಲ್ಲ, ಸದರಿ ಕರಾರುಪತ್ರದ ಮೇಲೆ ನನ್ನಹೆಸರಿಗೆ ಖಾತೆ ಮಾಡಲು ಅರ್ಜಿ ಕೊಟ್ಟಿದ್ದೆ ಅದರ ಆಧಾರದ ಮೇಲೆ ಮಾಡಿದ್ದಾರೆ. ನಿಡಿ-5ರಲ್ಲಿ ಅಳತೆಯನ್ನು ಹೊಡೆದು ಪುನಃ ಬರೆದಿದ್ದಾರೆ ಎಂದರೆ ಸರಿಯಲ್ಲ, ಸದರಿ ಕ್ರಯದ ಕರಾರುಪತ್ರದ ಅಧಾರದ ಮೇಲೆ ಯಾವುದೇ ಖಾತೆಯನ್ನು ಮಾಡಿಸಿಕೊಂಡಿಲ್ಲ ಆದರೆ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ತಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ, ಸದರಿ ದಾಖಲೆ ಅಧಾರದ ಮೇಲೂ ಸಹ ನಾನು ಆ ಆಸ್ತಿಯ ಸ್ವಾದೀನದಲ್ಲಿಲ್ಲ ಎಂದರೆ ಸರಿಯಲ್ಲ, ಕ್ರಯದ ಕರಾರು ಮಾಡಿಸಿಕೊಳ್ಳುವಾಗ ಸರ್ಕಾರದಿಂದ ಮಾಡಿಸಿಕೊಂಡಿದ್ದೇನೆ, ಕ್ರಯದ ಕರಾರನ್ನು ಮಂಡಲ್‌ನಲ್ಲಿ ಬರೆಸಿಕೊಟ್ಟಿದ್ದಾರೆ,

ಗಿರಿಜಮ್ಮ ರತ್ನಾಚಾರಿ ಇಂದ ಕರಾರುತಪ್ರ ಮಾಡಿಸಿಕೊಳ್ಳುವಾಗ ಅವರ ಹೆಸರಿಗೆ ಖಾತೆ ಪಹಣಿ ಇತ್ತಾ ಎಂದರೆ ಅವರಿಂದ ಮಾಡಿಸಿಕೊಂಡಿರುವುದು ಎಂದಿರುತ್ತಾರೆ. ಸದರಿ ಗಿರಿಜಮ್ಮ ರತ್ನಾಚಾರಿಗೆ ಸರ್ಕಾರದಿಂದ ಅವರಿಗೆ ಮಂಜೂರಾಗಿರುತ್ತದೆ. ಸದರಿ ಗಿರಿಜಮ್ಮ ರತ್ನಾಚಾರಿಗೆ ಸದರಿ ಆಸ್ತಿಯನ್ನು ಸರ್ಕಾರದಿಂದ ಕೊಟ್ಟಿದ್ದಾರೆಂದು ತೋರಿಸಲು ಅವರಿಂದ ಹಕ್ಕು ಬಿಡುಗಡೆ ಪತ್ರ ಪಡೆದಿದ್ದೇನೆ. ಸದರಿ ಗಿರಿಜಮ್ಮ ರತ್ನಾಚಾರಿಗೆ ಯಾವಾಗ ಮಂಜೂರಾಗಿತ್ತು ಎಂದು ದಿನಾಂಕ ತಿಂಗಳು ಹೇಳಲು ಆಗುವುದಿಲ್ಲ, ಯಾವುದೇ ಒಂದು ಆಸ್ತಿಯನ್ನು ಸರ್ಕಾರದಿಂದ ಮಂಜೂರು ಮಾಡಿದರೆ ನಿಗದಿತ ಅವದಿ ಒಳಗೆ ಮಾರಾಟ ಮಾಡಬಾರದು ಎಂಬ ನಿಯಮ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಸದರಿ ಗಿರಿಜಮ್ಮನಿಂದ ಆ ಆಸ್ತಿಯನ್ನು ಪಡೆಯುವಾಗ ಸರ್ಕಾರದಿಂದ ಅನುಮತಿ ಪಡೆದಿದ್ದೆ ಅಂದರೆ ಪಂಚಾಯಿತಿ ಮುಖಾಂತರ ತಾಲೂಕು ಕಚೇರಿ ಮುಖಾಂತರ ಮಾಡಿಸಿಕೊಂಡಿದ್ದೇನೆ, ಸದರಿ ದಾಖಲೆಯನ್ನು ಪಂಚಾಯಿತಿಗೂ ಸಹ ಕೊಟ್ಟಿದ್ದೇನೆ. ಸದರಿ ಕ್ರಯದ ಕರಾರಿನ ಮೇಲೆ ರತ್ನಮ್ಮಳನ್ನು ಕೇಳಿ ನೊಂದು ಮಾಡಿಸಿಕೊಂಡಿರುವುದಿಲ್ಲ ಅದನ್ನು ಮಾಡಿಸಿಕೊಳ್ಳುವಾಗ ತೊಂದರೆ ಇತ್ತು ಎಂದು ನುಡಿದಿರುತ್ತಾರೆ.

ಸದರಿ ನಿಡಿ-7 ರ ಮೇಲೆ ಚಕ್ಕುಬಂದಿ ಹೊರತು ಪಡಿಸಿ ಆಸ್ತಿಯ ಸಂಖ್ಯೆಯನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರಿಸಿರುವುದಿಲ್ಲ, ಸದರಿ ಗಿರಿಜಮ್ಮನಿಗೆ ಪಂಚಾಯಿತಿ ಇಂದ ಮಂಜೂರು ಮಾಡಿರುತ್ತಾರೆ. ಸದರಿ ನಿಡಿ-7ರಲ್ಲೂ ಸಹ ಗಿರಿಜಮ್ಮನಿಗೆ ಪಂಚಾಯಿತಿಯಲ್ಲಿ ಮಂಜೂರು ಆಗಿದ್ದು ಎಂದು ಅದರಲ್ಲಿ ನಮೂದು ಇಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದಿರುತ್ತಾರೆ ಸದರಿ ಗಿರಿಜಮ್ಮನ ಹೆಸರಿಗೆ ಮಂಜೂರಾದಂತಹ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ,

ಸದರಿ ಗಿರಿಜಮ್ಮನ ಹೆಸರಿಗೆ ಮಂಜೂರಾದ ಖಾತೆ ನಂಬರ್ 5 ಇತ್ತಾ ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಗಿರಿಜಮ್ಮನಿಗೆ ಆಸ್ತಿ ಮಂಜೂರಾಗಿದ್ದೂ ಇಲ್ಲ ಮತ್ತು ಆಕೆಗೆ ಅಂತಹ ಆಸ್ತಿ ಇದ್ದಿದ್ದೂ ಇಲ್ಲ ಆದರೆ ನಾನು ಗಿರಿಜಮ್ಮ ಸೇರಿ ಹಕ್ಕು ಪತ್ರ ಮತ್ತು ಕರಾರುಪತ್ರವನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ, ಸದರಿ ಕಾನೇಶುಮಾರಿ 10ರಲ್ಲಿ ಎಂಟು ಗುಂಟೆ ಪೂರ್ವಕ್ಕೆ ಹುಂಗೇನಹಳ್ಳಿ ರಸ್ತೆಪಶ್ಚಿಮಕ್ಕೆ ಗ್ರಾಮ ಠಾಣ, ಉತ್ತರಕ್ಕೆ ಸರ್ಕಾರಿ ಕಾಲುವೆ, ದಕ್ಷಿಣಕ್ಕೆ ಗ್ರಾಮ ಠಾಣಗೆ ಸೇರಿತ್ತು ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೇನೆ. ಸದರಿ ಮೇಲೆ ಹೇಳಿದ ಕಾನೇಶು ಮಾರಿ ಹತ್ತು ಗ್ರಾಮ ಠಾಣ ಆಸ್ತಿಯೂ ಅಲ್ಲ ಅದು ಗ್ರಾಮ ಠಾಣ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆ ಸಹ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ, ಸದರಿ ಗ್ರಾಮ ಪಂಚಾಯಿತಿಯವರಿಗೆ ಯಾವುದೇ ಹಕ್ಕು ಇಲ್ಲ ನಾನು ಹೇಳಿದ ಹಾಗೆ ಯಾವುದೇ ಲೇಔಟ್ ಮಾಡಿಲ್ಲ ಎಂದರೆ ಸರಿಯಲ್ಲ,

ಸದರಿ ಗ್ರಾಮ ಠಾಣರವರು ಠರಾವು ಮಾಡಿದ್ದಾರೆ ಎಂದು ನಾವು ಖರೀದಿ ಮಾಡಿದ ನಂತರ ಒಂದೊಂದೆ ಗೊತ್ತಾಯಿತು. ಸದರಿ ಗಿರಿಜಮ್ಮನಿಂದ ಆಸ್ತಿಯನ್ನು ಖರೀದಿ ಮಾಡುವ ಮೊದಲು ಅವಳಿಗೆ ಹೇಗೆ ಬಂತು ಎಂದು ತಿಳಿದಿದ್ದೇನೆ ಅವಳಿಗೆ ಪಂಚಾಯಿತಿಯವರು ಹಕ್ಕು ಪತ್ರ ನೀಡಿದ್ದಾರೆ ಮತ್ತು ಬೇರೆಯವರಿಗೂ ಕೊಟ್ಟಿದ್ದಾರೆ ಎಂದು ತಿಳಿದು ಮಾಡಿಸಿಕೊಂಡಿದ್ದೇನೆ. ಸದರಿ ನಿಡಿ-13ರ ಪ್ರಕಾರ ಎರಡು ಬಾರಿ ನಿವೇಶನ ಸಂಖ್ಯೆ ಏಳು ಮತ್ತು ಏಳು ಎಂದು ಕೊಟ್ಟಿದ್ದು ಎರಡು ಪ್ರತ್ಯೇಕ ಚಕ್ಕುಬಂದಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಆಕೆಗೆ 30 X 40 ಅಡಿ ಜಾಗ ಕೊಟ್ಟಿದ್ದಾರೆ ಎಂದು ನುಡಿದಿರುತ್ತಾರೆ.

ಸದರಿ ನಾನು ಹಾಜರು ಪಡಿಸಿರುವ ದಾಖಲೆ ಪ್ರಕಾರವೇ ಎರಡು ಠರಾವು ಇದ್ದು ಕ್ರಮ ಸಂಖ್ಯೆ 7 ಮತ್ತು ಇನ್ನೊಂದು ಕ್ರಮ ಸಂಖ್ಯೆ 7 ಎರಡುಕಡೆ ಬರೆದು ಎರಡು ಪ್ರತ್ಯೇಕ ಚಕ್ಕುಬಂದಿ ಹಾಕಿ ಎರಡು ಆಸ್ತಿ ಕೊಡಲಾಗಿದೆ ಎಂದು ನಮೂದು ಮಾಡಲಾಗಿದ್ದು ಅದರಲ್ಲಿ ಗಿರಿಜಮ್ಮನಿಗೆ ಯಾವುದು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಒಂದು ಆಸ್ತಿ ಕೊಟ್ಟಿದ್ದು 30 X 40 ಎಂದು ನುಡಿದಿರುತ್ತಾರೆ. ಆ ಠರಾವಿನ ಪ್ರಕಾರ ಎರಡು ಆಸ್ತಿಗಳ ಪೈಕಿ ಯಾವುದು ಗಿರಿಜಮ್ಮನಿಗೆ ಕೊಟ್ಟಿದ್ದು ಎಂದು ಹೇಳಲು ನನಗೆ ಓದು ಬರಹ ಬರುವುದಿಲ್ಲ. ಸದರಿ ಆ ಠರಾವಿನ ಪ್ರಕಾರವು ಸಹ ನಾನು ಹೇಳಿದ ಹಾಗೆ ಗಿರಿಜಮ್ಮನಿಗೆ 30 40 ಅಳತೆ ಇಲ್ಲ ಅಲ್ಲಿ 10 X 11 ಮೀಟರ್ ಇದೆ ಎಂದರೆ ಸಾಕ್ಷಿ ನಾವು ನಿವೇಶನ ಎಂದು ಮಾಡಿದ್ದು ಎಂದಿರುತ್ತಾರೆ. ಸದರಿ ನಿಡಿ-13 ದಾವಾ ಆಸ್ತಿಗೆ ಸಂಬಂದಪಟ್ಟ ದಾಖಲೆಯಲ್ಲ ಎಂದರೆ ಸರಿಯಲ್ಲ. ನಂದಾರೆಡ್ಡಿ ಇಂದಾಗಲೀ ಅಥವಾ ಅವರ ತಾತನಿಂದಾಗಲೀ ದಾವಾ ಆಸ್ತಿಯ ಸ್ವಾದೀನವನ್ನು ಯಾವತ್ತೂ ಪಡೆದಿಲ್ಲ ಎಂದರೆ ಸರಿಯಲ್ಲ.

**<u>ಹೆಚ್ಚಿನ ಪಾಟಿ ಸವಾಲಿಗೆ ವೇಳೆ ಕೇಳಲಾಗಿ ಪ್ರಕರಣ ಮುಂದೂಡಲಾಯಿತು</u>**

**ಓ.ಹೇ ಕೇ ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**